Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 18-11-2022

**ಪತ್ರಿಕಾ ಪ್ರಕಟಣೆ:**

# ನವೀಕರಿಸಲಾಗುವ ಸಂಪನ್ಮೂಲಗಳ ಕುರಿತಾದ ಉಪನ್ಯಾಸ ಯಶಸ್ವಿಯಾಗಿ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ "ನವೀಕರಿಸಲಾಗುವ ಸಂಪನ್ಮೂಲಗಳು ಮತ್ತು ಶಕ್ತಿಯ ಸಂಗ್ರಹಣೆ " ಎಂಬ ವಿಷಯದ ಕುರಿತು ಒಂದು ದಿನದ ಉಪನ್ಯಾಸ ಕಾರ್ಯಕ್ರಮವನ್ನು ನವೆಂಬರ್ 18 ರಂದು ಆಯೋಜಿಸಲಾಗಿತ್ತು. ಗೋವಾದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ಸುರೇಶ ಮಿಕ್ಕಿಲ್ಲಿ ಅವರು ಸ್ಮಾರ್ಟ್ ಗ್ರಿಡ್, ಗ್ರೀನ್ ಎನರ್ಜಿ ಕುರಿತಾಗಿ ಉಪನ್ಯಾಸ ನೀಡಿದರು. ಸೌರ ಶಕ್ತಿಯ ಸಮಗ್ರ ಬಳಕೆಯಿಂದ ನವಿಕರಿಸಲಾಗದ ಸಂಪನ್ಮೂಲದ ಬಳಕೆ ತಗ್ಗಿಸಿ ವಾತಾವರಣದ ಮೇಲಾಗುವ ದುಷ್ಪರಿಣಾಮದ ಪ್ರಮಾಣವನ್ನು ಕಡಿಮೆ ಮಾಡಬಹುದೆಂದು ಹೇಳಿದರು. ಸಾಮಾನ್ಯ ವಿದ್ಯುತ್ ಜಾಲವನ್ನು ಸ್ಮಾರ್ಟ್ ಗ್ರಿಡ್ ಮಾಡುವ ಪ್ರಕ್ರಿಯೆಯಲ್ಲಿ ಎದುರುಗವ ಸವಾಲುಗಳನ್ನು ವಿವರಿಸುತ್ತ ಶಕ್ತಿಯ ಸಂಗ್ರಹಣೆ ವಿಧಗಳನ್ನು ವಿವರಿಸಿದರು. ಎಲೆಕ್ಟ್ರಿಕಲ್ ವಾಹನದ ಚಾರ್ಜಿಂಗ್ ಸ್ಟೇಷನ್ ಕುರಿತಾದ ಮಾಹಿತಿಯನ್ನೂ ಸಹ ನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ಮಹಾವಿದ್ಯಾಲಯವು 200 ಕಿಲೋ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಹೊಂದಿದ್ದು, ಮುಂದಿನ ದಿನಗಳಲ್ಲಿ ಸೌರ ವಿದ್ಯುತ್ ನಿಂದ ಎಲೆಕ್ಟ್ರಿಕ್ ವಾಹನದ ಚಾರ್ಜಿಂಗ್ ಸ್ಟೇಷನ್ ಹೊಂದುವ ಭರವಸೆ ನೀಡಿದರು.

ಎಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ ವಿಭಾಗದ ಮುಖ್ಯಸ್ಥರಾದ ಪ್ರೊ. ಎ. ವಿ. ಕೊಳಕಿ ಸ್ವಾಗತಿಸಿದರು. ಡಾ. ಉತ್ತಮ್ ಸತ್ಪೂತೆ ವಂದಿಸಿದರು. ಕುಮಾರಿ. ಸೇಜಲ್ ಪೇಟಕರ್ ಮತ್ತು ಕುಮಾರಿ. ಶ್ರಾವಣಿ ಜೋಶಿ ನಿರೂಪಿಸಿದರು. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗವು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಬೋಧಕ ಸಿಬ್ಬಂದಿಗಳು ಹಾಗೂ 100ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


KLS


KLS VDIT, HALIYAL
KLS